**ದಿನಾಂಕ *: 09-01-2026* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ಎಮ್. ಐ. ಕೆ ವಕೀಲರಿಂದ,</u>**

ನಾನು ಮತ್ತು ಅಮ್ಜದಖಾನ ರವರು ಒಂದೇ ಜಾತಿಯವರು. ಅಮ್ಜದಖಾನ ರವರು ತಮ್ಮ ಮೋಟರ್ ಸೈಕಲ್ ಮೇಲೆ ಹೊರಟಿದ್ದರು. ಮೋಟರ್ ಸೈಕಲಿನ ನಂಬರ್ ಗೊತ್ತಿರುವುದಿಲ್ಲ. ಮೋಟರ್ ಸೈಕಲಗೆ ವಿಮೆ ಇದ್ದ ಬಗ್ಗೆ ಗೊತ್ತಿರುವುದಿಲ್ಲ. ನಾನು ಒಂದು ವರ್ಷದಿಂದ ಅಮ್ಜದಖಾನ ರವರು ಮೋಟರ್ ಸೈಕಲ್ ಚಲಾಯಿಸುವುದನ್ನು ನೋಡಿರುತ್ತೇನೆ. ಅವರಿಗೆ ಡಿ.ಎಲ್ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಮ್ಜದಖಾನ ರವರ ಮೇಲೆ ಪೋಲಿಸರು ಅಂತಿಮ ವರದಿಯನ್ನು ಸಲ್ಲಿಸಿರುವ ಬಗ್ಗೆ ಗೊತ್ತಿರುತ್ತದೆ. ಅಮ್ಜದಖಾನ ರವರಿಗೆ ಡಿ.ಎಲ್ ಮತ್ತು ವಿಮೆ ಇರದೇ ಇರುವುದರಿಂದ ಅವರ ಮೇಲೆ ಪೋಲಿಸರು ಅಂತಿಮ ವರದಿಯನ್ನು ಸಲ್ಲಿಸಿರುವ ಬಗ್ಗೆ ಗೊತ್ತಿರುವುದಿಲ್ಲ. ಮೋಟರ್ ಸೈಕಲ್ ಗೆ ಮುಂದಿನಿಂದ ವಾಹನವು ಡಿಕ್ಕಿಪಡಿಸಿರುತ್ತದೆ. ಮೋಟರ್ ಸೈಕಲ್ ಮತ್ತು ಬಸ್ಸಿಗೆ ಡಿಕ್ಕಿಯಾದಾಗ ಬೆಂಕಿ ಹತ್ತಿತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಅಪಘಾತವು ರಾತ್ರಿ 8.45 ಗಂಟೆ ಸುಮಾರಿಗೆ ಆಗಿರುತ್ತದೆ. ಈ ಕುರಿತು ನಾನು ದೂರು ನೀಡಿರುತ್ತೇನೆ. ನಾನು ಕೊಟ್ಟಿರುವ ದೂರಿನ ಪ್ರತಿಯನ್ನು ನಮ್ಮ ವಕೀಲರಿಗೆ ಕೊಟ್ಟಿದ್ದು ಅವರು ನ್ಯಾಯಾಲಯದಲ್ಲಿ ಸಲ್ಲಿಸಿರುವ ಬಗ್ಗೆ ಗೊತ್ತಿರುವುದಿಲ್ಲ. ಸದರಿ ಅಪಘಾತವು ಅಮ್ಜದಖಾನ ರವರ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಬಸ್ಸು ಅಮ್ಜದಖಾನ ರವರ ಮೇಲೆ ಹರಿದು ಹೋಗಿರುತ್ತದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿದಾರರು ಆ ರೀತಿ ಬರೆದಿರುವುದಿಲ್ಲ ಎಂದು ಹೇಳುತ್ತಾರೆ. ಅಪಘಾತವಾದ ನಂತರ ಬಸ್ಸ್ ಅಮ್ಜದಖಾನ ರವರನ್ನು 100 ಮೀಟರ್ ವರೆಗೆ ಎಳೆದುಕೊಂಡು ಹೋಗಿರುತ್ತದೆ. ನಾನು ಅಮ್ಜದಖಾನ ರವರ ಬಾಡಿಯನ್ನು 100 ಮೀಟರ್

ನಂತರದಲ್ಲಿ ತೆಗೆದುಕೊಂಡಿರುತ್ತೇನೆ. 100 ಮೀಟರ್ ವರೆಗೆ ರಕ್ತ ಹರಿದಿತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನಾನು ಗಮನಿಸಿರುವುದಿಲ್ಲ ಎಂದು ಹೇಳುತ್ತಾರೆ. ಬಸ್ಸಿನ ಚಾಲಕನ ಹೆಸರು ನೆನಪಿರುವುದಿಲ್ಲ. ಅಮ್ಜದಖಾನ ರವರು ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದರು. ಈ ಕುರಿತು ದಾಖಲೆಗಳು ಇರುತ್ತವೆ. ನಾನು ಮತ್ತು ಅಮ್ಜದಖಾನ ರವರು ಒಂದೆ ಜಾತಿಯವರು ಆಗಿದ್ದರಿಂದ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.